(iv) ಈದ್ಗಾ ಮೈದಾನ ಕೇಸ್‌ನ ವಿಚಾರ

ಶ್ರೀ ಜಗದೀಶ್ ಶೆಟ್ಟರು : ಮಾನ್ಯ ಅಧ್ಯಕ್ಷರೇ, 1992 ರಿಂದ 1994 ರ ಇಸವಿಯಲ್ಲಿ ರಾಷ್ಟ್ರಧ್ವಜ ಹಾರಿಸುವ ವಿಷಯದಲ್ಲಿ ಸರಕಾರವು ಸಾವಿರಾರು ಜನರ ಮೇಲೆ ನೂರಾರು ಕೇಸುಗಳನ್ನು ದಾಖಲು ಮಾಡಿದೆ. ಈಗ ಆ ಸಮಸ್ಯೆಯು ಬಗೆಹರಿದಿದ್ದು ಆ ಜನರು ಕೋರ್ಟ್‌ಕಚೇರಿಗಳಿಗೆ ಅಡ್ಡಾಡುವಂಥ ಪರಿಸ್ಥಿತಿಯು ಇದೆ. ಅಂಥ ಕೇಸುಗಳನ್ನು ಸರಕಾರದವರು ಹಿಂದಕ್ಕೆ ಪಡೆದು ಕೊಳ್ಳಬೇಕೆಂದು ತಮ್ಮ ಮೂಲಕ ಸರಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಸಿ. ಭೈರೇಗೌಡ (ಕೃಷಿ ಸಚಿವರು) : ಸರಕಾರದ ನೀತಿಗಳಿಗೆ ಅನುಸಾರವಾಗಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾದ ವಿಚಾರದ ಬಗ್ಗೆ ಮಾನ್ಯ ಗೃಹಸಚಿವರ ಗಮನಕ್ಕೆ ವಿಷಯವನ್ನು ತರುತ್ತೇನೆ.

(v) ಅರಕಲಗೂಡು ತಾಲೂಕಿನ ಕಳಿ ಮುದ್ದಿನ ಹಳ್ಳಿಗೆ ದೇವನೂರು ಎಂದು ನಾಮಕರಣ ಮಾಡಿರುವುದು.

ಶ್ರೀ ಎ. ಟಿ. ರಾಮಸ್ವಾಮಿ (ಅರಕಲ ಗೂಡು) : ಮಾನ್ಯ ಅಧ್ಯಕ್ಷರೇ, ನಮ್ಮ ಅರಕಲಗೂಡು ತಾಲ್ಲೂಕಿನಲ್ಲಿ ಕಳ್ಳಿಮುದ್ದನಹಳ್ಳಿ ಎಂದು ಒಂದು ಗ್ರಾಮ ಇದೆ. ಆ ಗ್ರಾಮದ ಹೊಸ ಬಡಾವಣೆಗೆ ದೇವನೂರು ಎಂದು ಹೇಳಿ ಹೊಸ ನಾಮಫಲಕವನ್ನು ಹಾಕಬೇಕೆಂದು ತಹಶೀಲ್ದಾರರು ಸೂಚಿಸಿದರು. ಹೀಗೆ ಸೂಚನೆ ಕೊಟ್ಟಮೇಲೆ ಅಲ್ಲಿ ಗಲಾಟೆಯಾಗಿ, ಶಾಂತಿಗೆ ಕೂಡ ಭಂಗ ಬಂದು 307ಕೇಸ್ ಮುಂತಾಗಿ ಆಯಿತು. ಹೀಗೆ ದೇವನೂರು ಎಂಬ ಹೆಸರನ್ನು ಇಡಲಿಕ್ಕೆ ಅದನ್ನು ತಹಶೀಲ್ದಾರರು ಸೂಚನೆ ಕೊಡುವ ವಿಚಾರದಲ್ಲಿ ಕಾನೂನು ನಿಯಮಾವಳಿಗಳಲ್ಲಿ ಅವಕಾಶ ಇದೆಯೇ? ಹೀಗೆ ಅವರು ಆದೇಶವನ್ನು ಕೊಟ್ಟ ಮೇಲೆ ನಾನು ಈಗಾಗಲೇ ಹೇಳಿದ ಹಾಗೆ ಅವರ ಮೊದಲಿನ ಲೆಟರ್‌ನಲ್ಲಿ ಸಚಿವರ ಆದೇಶದ ಪ್ರಕಾರ ನೀವು ದೇವನೂರು ಎಂದು ಹೆಸರಿಡ ಬೇಕೆಂದು ಸೂಚಿಸಿದರು. ಆ ಮೇಲೆ ಮತ್ತೊಂದು ಪತ್ರವನ್ನು ಬರೆದರು. ಅದರಲ್ಲಿ ಗ್ರಾಮಪಂಚಾಯತಿಯ ಮತ್ತು ಗ್ರಾಮಸ್ಥರ ಪರವಾನಿಗೆಯನ್ನು ತೆಗೆದುಕೊಂಡು ನಾಮಫಲಕವನ್ನು ಹಾಕಿ ಎಂದು ಪಿಡಿಬ್ಯೂಡಿಯವರಿಗೆ ಬರೆದರು. ಈ ರೀತಿಯ ಸರ್ವಾಧಿಕಾರದ ಆಡಳಿತವನ್ನು ನಡೆಸಿ ನೆಮ್ಮದಿಯಾಗಿದ್ದಂಥ ಗ್ರಾಮಸ್ಥರ ಬದುಕಿನ ಮೇಲೆ ಸುಮ್ಮನೆ ಗಧಾಪ್ರಹಾರ ಮಾಡತಕ್ಕಂಥಾದ್ದು ಎಷ್ಟುರ ಮಟ್ಟಿಗೆ ಸೂಕ್ತ ಎಂದು ಹೇಳಬೇಕು.

ಶ್ರೀ ಸಿ. ಭೈರೇಗೌಡ : ಮಾನ್ಯ ಅಧ್ಯಕ್ಷರೇ,